ದಿನಾಂಕಃ 25.03.2025

ಅಸಲುದಾವಃ 97/2023

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಈಗ ತೋರಿಸಿದ ದಾಖಲಾತಿ ನಾನು ನಮ್ಮ ವಕೀಲರಿಂದ ಪ್ರತಿವಾದಿ ಸರಸ್ವತಮ್ಮನವರಿಗೆ ಕಳುಹಿಸಿರುವ ಕಾನೂನು ತಿಳುವಳಿಕೆ ಪತ್ರ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿರುವ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪತ್ರ ನೀವು ಕಳೆದ ವಾಯಿದೆಯಲ್ಲಿ ಪಾಟೀ ಸವಾಲಿನ ವೇಳೆ ನಿಮ್ಮ ಅಣ್ಣ ಶಿವಣ್ಣರವರ ಬಳಿ ಸರಸ್ವತಮ್ಮ ರೂ.1 ಲಕ್ಷ ಸಾಲ ತೆಗೆದುಕೊಂಡಿದ್ದರು ಎಂದು ಹೇಳಿದ್ದೀರಿ ನೀವು ಹೇಳುತ್ತಿರುವ ಪತ್ರ ಇದೇ ಪತ್ರವ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಪತ್ರವನ್ನು ಸಾಕ್ಷಿ ಒಪ್ಪಿರುವ ಕಾರಣ ನಿಡಿ2 ಎಂದು ಗುರುತಿಸಲಾಯಿತು. ನಿಡಿ2 ಪತ್ರಕ್ಕೆ ನೀವು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ನಿಡಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಡಿ2 ಎ ಎಂದು ಗುರುತಿಸಲಾಯಿತು. ನಿಡಿ2 ಪತ್ರವನ್ನು ಓದಿಯೇ ಸಹಿ ಹಾಕಿರುತ್ತೇನೆ. ನಿಡಿ2 ರಲ್ಲಿ ಜಮೀನಿನ ಬಾಬ್ತು ಕ್ರಯದ ಕರಾರು ಎಂದು ಬರೆದಿದೆ ಆದರೆ ನೀವು ಸಾಲದ ಬಾಬ್ತು ಪತ್ರ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ಹೌದು ಹಣದ ಭದ್ರತೆಗಾಗಿ ನನ್ನ ಅಣ್ಣ ಮಾಡಿಕೊಂಡಿರುವ ವ್ಯವಹಾರ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಅಣ್ಣ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಆದರೆ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ನಿಡಿ2 ಪತ್ರ ರದ್ದಾಗಿದೆಯ ಎಂದರೆ ಸಾಕ್ಷಿ ರಿಜಿಸ್ಟರ್ ಸಮಯದಲ್ಲಿ ರದ್ದು ಮಾಡಬೇಕೆಂದು ಇಟ್ಟುಕೊಂಡಿದ್ದರು ಆದರೆ ಆ ಪತ್ರ ರದ್ದಾಗಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ2 ಪತ್ರವನ್ನು ನೀವು ಮತ್ತು ನಿಮ್ಮ ಅಣ್ಣ ಸೇರಿ ಕ್ರಯದ ಕರಾರು ಎಂದು ಬರೆಸಿದ್ದೀರಿ ಸಾಲದ ಭದ್ರತೆಗಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದಾದ ನಂತರ ಆ ಪತ್ರ ತಪ್ಪಾಗಿದೆ ಎಂದು ಹೇಳಿ ಈಗ ನೀವು ಹಾಜರು ಪಡಿಸಿರುವ ನಿಪಿ1 ಪತ್ರವನ್ನು ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಆ ಪತ್ರದ ಚೆಕ್ಕುಬಂದಿಯೇ ಬೇರೆ ನನಗೆ ಬರೆದುಕೊಟ್ಟಿರುವ ಚೆಕ್ಕುಬಂದಿಯೇ ಬೇರೆ ಎಂದು ಉತ್ತರಿಸುತ್ತಾರೆ. ಅದಾದ ನಂತರ ನೀವು ಪನಃ ಶಿವಣ್ಣರವರ ಹೆಸರಿಗೆ ದಿ.02.12.2022 ರಂದು ಅದೇ ಆಸ್ತಿಗೆ ಒಂದು

ಪತ್ರವನ್ನು ಬರೆಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ನನಗೆ ಆ ಪತ್ರದ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ನನ್ನ ಅಣ್ಣನ ಹೆಸರಿಗೆ ಆ ಪತ್ರ ಆಗಿರುವ ಬಗ್ಗೆ ಮಾಹಿತಿ ಇದೆ ಆದರೆ ಅದು ನನ್ನ ಅಣ್ಣನ ವ್ಯವಹಾರ ಎಂದು ಹೇಳುತ್ತಾರೆ. ಆ ಪತ್ರವನ್ನು ಸಮಯ ಮುಗಿದು ಹೋಗಿದೆ ಎಂದು ಹೇಳಿ ನೀವು ಮತ್ತು ನಿಮ್ಮ ಅಣ್ಣ ಸೇರಿ ಆ ಪತ್ರವನ್ನು ಬರೆಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ2 ಪತ್ರ ಆದ ಸಮಯದಲ್ಲಿ ಕೊಟ್ಟಿರುವ ರೂ.1 ಲಕ್ಷವನ್ನು ಹೊರತು ಪಡಿಸಿ ನೀವಾಗಲಿ, ನಿಮ್ಮ ಅಣ್ಣ ಶಿವಣ್ಣನಾಗಲಿ ಯಾವುದೇ ಹಣವನ್ನು ಪ್ರತಿವಾದಿಯರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ನನ್ನ ಕ್ರಯದ ವ್ಯವಹಾರದ ಬಾಬ್ತು ರೂ.19 ಲಕ್ಷಗಳ ಪೈಕಿ ರೂ.16 ಲಕ್ಷಗಳನ್ನು ಸಾಕ್ಷಿದಾರರ ಸಮುಖದಲ್ಲಿ ಸಬ್ ರಿಜಿಸ್ಟರ್ ರವರ ಕಛೇರಿಯಲ್ಲಿ ಕೊಟ್ಟಿದ್ದೇನೆ ಬಾಕಿ 3 ಲಕ್ಷಮಾತ್ರ ಕೊಡುವುದಿದ್ದು ಅದನ್ನೂ ನೋಟೀಸ್ ಕೊಟ್ಟ ವೇಳೆ ಚೆಕ್ ಮೂಲಕ ಅವರಿಗೆ ತಲುಪಿಸಿದ್ದೆನೆ ಎಂದು ಉತ್ತರಿಸುತ್ತಾರೆ. ನಿಪಿ1 ಕ್ರಯದ ಕರಾರು ಅಲ್ಲ, ಮೊದಲ ಪತ್ರ ತಪ್ಪಾಗಿದೆ ಎಂದು ಹೇಳಿ ಬರೆಸಿಕೊಂಡಿರುವ ಪತ್ರ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಮಾರಾಟದ ಬಾಬ್ತು ಯಾವುದೇ ಮಾತುಕತೆಯೇ ನಡೆದಿಲ್ಲ ಎಂದರೆ ಸಾಕ್ಷಿ ಅವರ ಮಗಳ ಮದುವೆಗಾಗಿ ಹಣದ ಅವಶ್ಯಕತೆ ಇದೆ ಎಂದು ಹೇಳಿ ಮಾತು ಕತೆ ನಡೆದಿರುತ್ತದೆ ಎಂದು ಉತ್ತರಿಸುತ್ತಾರೆ. ನೀವು ಹೇಳುವಂತೆ ರೂ.19 ಲಕ್ಷಗಳಿಗೆ ವ್ಯವಹಾರವಾಗಿ ಆ ಪೈಕಿ ಪ್ರತಿವಾದಿಗಳಿಗೆ ರೂ.16 ಲಕ್ಷ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ, ಅವರಿಗೆ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸಾಕ್ಷಿ ಹಣ ಸಂದಾಯವಾಗಿದೆ ಎಂದು ಉತ್ತರಿಸುತ್ತಾರೆ. ನೀವು ವಕೀಲರಿಂದ ಪ್ರತಿವಾದಿಗೆ ಕಳುಹಿಸಿದ ನೋಟೀಸಿಗೆ ಅವರು ಉತ್ತರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ನೀವು ನೋಟೀಸಿನ ಜೊತೆ ಕಳುಹಿಸಿರುವ ಚೆಕ್ ಅನ್ನು ಪ್ರತಿವಾದಿಯರು ನೀಡಿರುವ ಪ್ರತ್ಯುತ್ತರದ ನೋಟೀಸ್ ಜೊತೆ ನಿಮ್ಮ ವಕೀಲರ ಕಛೇರಿಗೆ ಕಳುಹಿಸಿದ್ದಾರೆ ಎಂದರೆ ಸಾಕ್ಷಿ ಆ ಮಾಹಿತಿ ನಮ್ಮ ವಕೀಲರಿಗೆ ಗೊತ್ತಿರಬಹುದು ನಮ್ಮ ವಿಳಾಸಕ್ಕೆ ಯಾವುದೇ ನೋಟೀಸ್ ಬಂದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಕಳುಹಿಸಿರುವ ಚೆಕ್ ನಗದೀಕರಣವಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ಚೆಕ್ ಏನಾಯಿತು ಎಂದು ನಿಮ್ಮ ವಕೀಲರ ಬಳಿ ಕೇಳಿದ್ದೀರ ಎಂದರೆ ಸಾಕ್ಷಿ ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಅಣ್ಣ ಒಟ್ಟು ಕುಟುಂಬದಲ್ಲಿಯೇ ಇದ್ದು ಒಟ್ಟಿಗೆ ವ್ಯವಹಾರ ಮಾಡುತ್ತೇವೆ ಎಂದರೆ ಸುಳ್ಳು. ನಿಪಿ1ರ ಕರಾರು ಪತ್ರವನ್ನು ಸರಸ್ವತಮ್ಮನವರೆ ಸ್ಟಾಂಪ್ ವೆಂಡರ್ ಚಿಕ್ಕಯ್ಯರವರ ಬಳಿ

ಬರೆಸಿರುತ್ತಾರೆ. ಆ ವೇಳೆ ಸರಸ್ವತಮ್ಮನವರು ಆದಾರ್ ಕಾರ್ಡ್, ಆರ್.ಟಿ.ಸಿ ತಂದಿದ್ದರು. ಪತ್ರ ಬರೆಸುವ ವೇಳೆ ಶಿವಣ್ಣ ಬಿನ್ ಚಿಕ್ಕಣ್ಣ, ಡಿ.ಸ್ವಾಮಿ ಬಿನ್ ದೇಸಿಗೌಡ, ನಾನು ಮತ್ತು ಪ್ರತಿವಾದಿ ಸರಸ್ವತಮ್ಮ ಮತ್ತು ಅವರ ಮಗಳು ಸ್ವಾತಿರವರು ಬಂದಿದ್ದರು. ನಾನು ಬೈಕ್ ನಲ್ಲಿ ಬಂದಿದ್ದೆನು, ಪ್ರತಿವಾದಿ ಮತ್ತು ಅವರ ಮಗಳು ಹಾಗು ಅವರ ಜೊತೆ ಸಾಕ್ಷಿದಾರರನ್ನು ಕೆರೆದುಕೊಂಡು ಬಂದಿದ್ದರು. ಡಿ.ಸ್ವಾಮಿ ಬಿನ್ ದೇಸಿಗೌಡ ಎಂಬ ಸಾಕ್ಷಿದಾರರನ್ನು ಪ್ರತಿವಾದಿಯವರೇ ಕರೆದುಕೊಂಡು ಬಂದಿದ್ದರು. ನೀವು ಮತ್ತು ಸಾಕ್ಷಿದಾರರೆಲ್ಲ ಒಟ್ಟಾಗಿ ಪ್ರತಿವಾದಿ ಬರುವ ಮೊದಲೆ ಪತ್ರವನ್ನು ತಯಾರು ಮಾಡಿಸಿದ್ದಿರಿ ಎಂದರೆ ಸಾಕ್ಷಿ ಸುಳ್ಳು, ನಾವು ಬರುವ ಮೊದಲು ಅವರೇ ಪತ್ರ ತಯಾರು ಮಾಡಿಸಿದ್ದರು ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರಾದ ಡಿ.ಸ್ವಾಮಿ ನಿಮ್ಮ ಸ್ನೇಹಿತರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರ ಕುಟುಂಬಕ್ಕೆ ಎಷ್ಟು ಆಸ್ತಿ ಇದೆ ಎಂದರೆ ಸಾಕ್ಷಿ 1 ಎಕರೆ 10 ಗುಂಟೆ ಜಮೀನು ಮತ್ತು ಮನೆ ಇದೆ ಎಂದು ಉತ್ತರಿಸುತ್ತಾರೆ. ಇನ್ನು 10 ಗುಂಟೆ ಇದೆ ಎಂದು ಹೇಳುವ ಜಮೀನಿನ ಸರ್ವೆ ನಂಬರ್ ಗೊತ್ತ ಎಂದರೆ ಸಾಕ್ಷಿ ಸರ್ವೆ ನಂಬರ್ ಗೊತ್ತಿಲ್ಲ ಕೊತ್ತಿಪುರ ಗ್ರಾಮಕ್ಕೆ ಬರುತ್ತದೆ ಎಂದು ಉತ್ತರಿಸುತ್ತಾರೆ. ದಾವ ಜಮೀನನ್ನು ಹೊರತು ಪಡಿಸಿ ಪ್ರತಿವಾದಿಯರಿಗೆ ಅವರ ಜೀವನೋಪಾಯಕ್ಕೆ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಅವರ ಗಂಡನ ತಂದೆಯ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ಆ ದಾಖಲಾತಿಗಳನ್ನು ಹಾಜರು ಪಡಿಸಬಹುದ ಎಂದರೆ ಸಾಕ್ಷಿ ನಮ್ಮ ಅಗ್ರಿಮೆಂಟ್‌ಗೆ ಸಂಬಂಧಪಟ್ಟಂತೆ ಹಾಜರು ಪಡಿಸಿದ್ದೆನೆ ಬೇರೆ ಆಸ್ತಿಯ ಬಗ್ಗೆ ಸಂಬಂದವಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರಿಗೆ ಬೇರೆ ಆಸ್ತಿಗಳಿವೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

2. ಅಗ್ರಿಮೆಂಟ್ ಆಗುವ ಮೊದಲು ಮಾತು ಕತೆ ಆಗಿತ್ತ ಎಂದರೆ ಸಾಕ್ಷಿ ಆಗಿತ್ತು ಎಂದು ಉತ್ತರಿಸುತ್ತಾರೆ. ಯಾವಾಗ ಮಾತು ಕತೆಯಾಗಿತ್ತು ಎಂದರೆ ಸಾಕ್ಷಿ ಅಗ್ರಿಮೆಂಟ್ ಆಗುವ 15 ದಿನಗಳ ಹಿಂದೆ ಮಾತು ಕತೆಯಾಗಿತ್ತು ಎಂದು ಉತ್ತರಿಸುತ್ತಾರೆ. ಮಾತು ಕತೆಯ ವೇಳೆ ಯಾರು ಸೇರಿದ್ದಿರಿ ಎಂದರೆ ಸಾಕ್ಷಿ ನಾನು, ನನ್ನ ಅಣ್ಣ, ನನ್ನ ತಂದೆ ತಾಯಿ, ಪ್ರತಿವಾದಿ ಸರಸ್ವತಮ್ಮ ಮತ್ತು ಅವರ ಇಬ್ಬರು ಮಕ್ಕಳು ಸೇರಿದ್ದೆವು ಎಂದು ಉತ್ತರಿಸುತ್ತಾರೆ. ಮಾತು ಕತೆಯಾದ ವೇಳೆ ರೂ.1100 ಅನ್ನು ಕೊಟ್ಟಿದ್ದೆವೆ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ವಿಚಾರವನ್ನು ನಿಮ್ಮ ನೋಟೀಸಿನಲ್ಲಾಗಲಿ, ವಾದ ಪತ್ರದಲ್ಲಾಗಲಿ, ಮುಖ್ಯ ಸಾಕ್ಷ್ಯಾ ಪ್ರಮಾಣ ಪತ್ರದಲ್ಲಾಗಲಿ ಹೇಳಿದ್ದೀರ ಎಂದರೆ ಸಾಕ್ಷಿ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ರೂ.16 ಲಕ್ಷವನ್ನು ಎಲ್ಲಿಂದ ತಂದಿದ್ದೀರಿ ಎಂದರೆ ಸಾಕ್ಷಿ ನಾನು ಸರ್ಕಾರಿ

ನೌಕರನಾಗಿದ್ದು ಸಂಬಳದ ಹಣವನ್ನು ಮನೆಯಲ್ಲಿಯೇ ಕೂಡಿ ಇಟ್ಟಿದ್ದೆನು ಮತ್ತು ಹೈನುಗಾರಿಕೆ, ರೇಷ್ಮೆ ಕೃಷಿಯಿಂದ ಹಣ ಸಂಪಾದನೆ ಮಾಡಿ ಕೂಡಿ ಇಟ್ಟಿದ್ದೆನು ಎಂದು ಉತ್ತರಿಸುತ್ತಾರೆ. ನಿಮ್ಮ ಇಲಾಖೆಯಿಂದ ಜಮೀನು ಖರೀದಿಸಲು ಅನುಮತಿ ಪಡೆದಿದ್ದೀರ ಎಂದರೆ ಸಾಕ್ಷಿ ಕ್ರಯ ಪತ್ರ ಆದ ನಂತರ ದಾಖಲೆಗಳನ್ನು ಸಲ್ಲಿಸುವಂತೆ ಕೇಳಿದ್ದರು ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂ. ನಲ್ಲಿ 1 ಎಕರೆ ಜಮೀನಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವ ಜಮೀನಿನ ಪೂರ್ವಕ್ಕೆ ನಮ್ಮ ತಂದೆಯ ಹೆಸರಿನಲ್ಲಿ ಇರುವ ನಮ್ಮ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಹಳ್ಳ ಮತ್ತು ಸರ್ಕಾರಿ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಮದ್ದೂರು ಅಲಗೂರು ರಸ್ತೆ ಎಂದರೆ ಸಾಕ್ಷಿ ಸುಳ್ಳು, ನನ್ನ ಅಗ್ರಿಮೆಂಟ್ ಪ್ರಕಾರ ಸರಸ್ವತಮ್ಮನವರೇ ಉಳಿಸಿಕೊಂಡಿರುವ ಜಮೀನು ಎಂದು ಉತ್ತರಿಸುತ್ತಾರೆ. ಉಳಿಕೆ ಜಮೀನು ಉತ್ತರಕ್ಕೆ ಎಷ್ಟು ಇದೆ ಎಂದರೆ ಸಾಕ್ಷಿ 19 ಗುಂಟೆ ಎಂದು ಉತ್ತರಿಸುತ್ತಾರೆ. ಆ 19 ಗುಂಟೆಯ ಜಮೀನಿನ ಉತ್ತರಕ್ಕೆ ನನ್ನ ತಂದೆ ವೀರಾಟಯ್ಯನವರ ಹೆಸರಿನಲ್ಲಿ ಇರುವ ಜಮೀನು ಎಂದು ಉತ್ತರಿಸುತ್ತಾರೆ. ಆ ಸರ್ವೆ ನಂ. ನಲ್ಲಿ ಪ್ರತಿವಾದಿ ಸರಸ್ವತಮ್ಮ, ವಿರಾಟಯ್ಯ, ಪುಟ್ಟರಾಜು, ಪುಟಮಾದಮ್ಮ, ಪುಟ್ಟಸ್ವಾಮಿ, ಜಯರತ್ನ ರವರ ಜಮೀನುಗಳನ್ನು ಒಟ್ಟುಗೂಡಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ದಾವ ಸರ್ವೆ ನಂ. ಒಟ್ಟು ವಿಸ್ತೀರ್ಣದ ಜಮೀನು ಪೋಡಾಗಿದೆಯ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪೋಡಾಗದೆ ಇರುವ ಕಾರಣ ಪ್ರತಿವಾದಿಯರಿಗೆ ಬೆದರಿಸಿ ಅವರ ಜಮೀನನ್ನು ಬರೆಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.